# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯದ ಕಛೇರಿ ಆದೇಶ ಸಂಖ್ಯೆ: **F.No.S-11012/01/2015-BL, dated -18/5/2016** ರನ್ವಯ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಜೀತದಾಳುಗಳ ತುರ್ತು ಪುನರ್ವಸತಿಗಾಗಿ ಲೆಕ್ಕ ಶೀರ್ಷಿಕೆ ಸಂಖ್ಯೆ- 2230-01-112-0-01(059)ರಡಿ ರೂ.2.75 ಕೋಟಿಗಳ ಕಾರ್ಪಸ್ ಅನುದಾನವನ್ನು ಬಿಡುಗಡೆ ಮಾಡುವ ಕುರಿತು.

ಉಲ್ಲೇಖ:
1. 2020-21ನೇ ಸಾಲಿನ ರಾಜ್ಯ ಸರ್ಕಾರದ ಆಯವ್ಯಯ ಅಭಿಯಾಚನೆ ಸಂಖ್ಯೆ-07
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/19/ಆರ್‌ಬಿಎಲ್/2019, ಬೆಂಗಳೂರು, ದಿನಾಂಕ- 02.01.2020
3. ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯದ ಕಛೇರಿ ಆದೇಶ ಸಂಖ್ಯೆ: **F.No.S-11012/01/2015-BL, dated -18/5/2016 .**
4. ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯದ ಕಛೇರಿ ಆದೇಶ ಸಂಖ್ಯೆ: **F.No.S-11012/01/2015-BL, dated -17/1/2017.**

ಪ್ರಸ್ತಾವನೆ:

ಮೇಲೆ ಓದಲಾದ(3)ರಲ್ಲಿ ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯವು ಪ್ರತೀ ಜಿಲ್ಲೆಯ ಜಿಲ್ಲಾಧಿಕಾರಿಯ ಅಧೀನದಲ್ಲಿ, ಬಿಡುಗಡೆಯಾದ ಜೀತದಾಳುಗಳ ತಕ್ಷಣ ನೆರವಿಗಾಗಿ **Bonded Labour Rehabilitation Fund(Corpus Fund)** ನ್ನು ಆಯಾ ರಾಜ್ಯ ಸರ್ಕಾರಗಳು ಸ್ಥಾಪಿಸಬೇಕೆಂದು ನಿರ್ದೇಶನ ನೀಡಿರುತ್ತದೆ. ಅದರನ್ವಯ ಮೇಲೆ ಓದಲಾದ(1)ರ ಆಯವ್ಯಯದ ಅಭಿಯಾಚನೆ ಸಂಖ್ಯೆ 23ರ ಲೆಕ್ಕ ಶೀರ್ಷಿಕೆ ಸಂಖ್ಯೆ- 2230-01-112-0-01(059)ರಡಿ 2020-21ನೇ ಸಾಲಿಗೆ ಜೀತದಾಳುಗಳ ಪುನರ್ವಸತಿ ಯೋಜನೆಯಡಿ ಕಾರ್ಪಸ್ ನಿಧಿಗಾಗಿ ರೂ.3.00 ಕೋಟಿಗಳ ಅನುದಾನವನ್ನು ಕಾಯ್ದಿರಿಸಲಾಗಿದೆ.

ಈವರೆವಿಗೂ ಎಲ್ಲಾ ಜಿಲ್ಲೆಗಳಲ್ಲೂ ಕಾಣಸಿಗುವ ಪ್ರಕರಣಗಳ ಸಂಖ್ಯೆಗಳ ಆಧಾರದ ಮೇಲೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಬಿಡುಗಡೆಗೊಳಿಸಲಾದ ಜೀತದಾಳುಗಳ ತಕ್ಷಣ ನೆರವಿಗೆ ಬಳಸಿಕೊಳ್ಳುವ ಸಂಬಂಧ ಸದರಿ ಸಾಲಿಗೆ ಕಾರ್ಪಸ್ ನಿಧಿಯನ್ನು ಬಿಡುಗಡೆಮಾಡಲು ಆರ್ಥಿಕ ಇಲಾಖೆ ಸಹಮತಿಸಿರುತ್ತದೆ. ಲೆಕ್ಕ ಶೀರ್ಷಿಕೆ ಸಂಖ್ಯೆ- 2230-01-112-0-01(059)- **(Rehabilitation of Bonded Labour-Corpus funds to all DCs)** ರಡಿ ಲಭ್ಯವಿರುವ ರೂ.3.00 ಕೋಟಿಗಳ ಅನುದಾನದ ಪೈಕಿ ರೂ.2.75 ಲಕ್ಷಗಳ ಅನುದಾನವನ್ನು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡುವ ಪ್ರಯುಕ್ತ ಈ ಆದೇಶ:

Scanned by CamScanner

<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/19/ಆರ್‌ಬಿಎಲ್/2020, ಬೆಂಗಳೂರು, ದಿನಾಂಕ-5.11.2020</u>

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ 18.5.2016ರ ಪರಿಷ್ಕೃತ ಜೀತದಾಳುಗಳ ಪುನರ್ವಸತಿ ಕಾರ್ಯಕ್ರಮದಡಿ ಜೀತ ಪದ್ಧತಿ(ರದ್ಧತಿ) ಕಾಯ್ದೆ 1976ರನ್ವಯ ಬಿಡುಗಡೆಗೊಳಿಸಲಾದ ಜೀತದಾಳುಗಳ ತಕ್ಷಣ ನೆರವಿಗೆ ಹಾಗೂ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಅನುಬಂಧ-1ರನ್ವಯ ಲೆಕ್ಕ ಶೀರ್ಷಿಕೆ ಸಂಖ್ಯೆ- 2230-01-112-0-01 **(Obj Code 059) (Rehabilitation of Bonded Labour- Corpus funds to all DCs)** ರಡಿ ಲಭ್ಯವಿರುವ ರೂ.3.00 ಕೋಟಿಗಳ ಅನುದಾನದ ಪೈಕಿ ರೂ.2.75 ಕೋಟಿಗಳ**(Rs. Two crore and seventy five lakhs only )** ಬಿಡುಗಡೆಗೊಳಿಸಲು ಸರ್ಕಾರವು ಹರ್ಷಿಸುತ್ತದೆ.

ಸದರಿ ಅನುದಾನವನ್ನು ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು ಬಳಕೆಮಾಡಲು ತಿಳಿಸಿದೆ:

1. ಕೇಂದ್ರ ಸರ್ಕಾರದ 18.5.2016ರ ಮಾರ್ಗಸೂಚಿ ಅಂಶ-5**(xiii, xiv)**ರಲ್ಲಿ ವಿವರಿಸಿರುವಂತೆ ಕಾರ್ಪಸ್ ನಿಧಿಯನ್ನು ಜೀತದಾಳುಗಳ ತುರ್ತು ಪರಿಹಾರಕ್ಕೆಂದು ಬಳಸಿಕೊಳ್ಳಬಹುದಾಗಿದೆ. 18.5.2016ರ ಮೊದಲು ಬಿಡುಗಡೆಯಾಗಿರುವ ಜೀತದಾಳುಗಳಿಗೆ ಈ ಪರಿಹಾರ ಅನ್ವಯಿಸುವುದಿಲ್ಲ.

   ಬಿಡುಗಡೆ ಪತ್ರ ನೀಡುವ ಮೊದಲು **FIR** ಖಡ್ಡಾಯ. ಬಿಡುಗಡೆ ಪತ್ರ ಹೊಂದಿದ ಜೀತವಿಮುಕ್ತರು ಮಾತ್ರ ತುರ್ತು ಪರಿಹಾರವನ್ನು ಪಡೆಯಲು ಅರ್ಹರಿರುತ್ತಾರೆ.

2. ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯದ ಕಛೇರಿ ಆದೇಶ ಸಂಖ್ಯೆ: **F.No.S-11012/01/2015-BL, dated - 17/1/2017** ರ ಪ್ರಕಾರ 17.1.2017ರ ನಂತರ ಬಿಡುಗಡೆಯಾದ ಜೀತದಾಳುಗಳಿಗೆ ತಲಾ ರೂ.20,000/-ಗಳನ್ನು ನೀಡಲು ಅವಕಾಶವಿದೆ. 18.5.2016ರಿಂದ 16.1.2017ರವರೆಗೂ ಬಿಡುಗಡೆಯಾದ ಜೀತದಾಳುಗಳಿಗೆ ತಲಾ ರೂ.5000/- ಗಳನ್ನು ಮಾತ್ರ ನೀಡಲು ಅವಕಾಶವಿದೆ.

3. ಅನ್ಯ ರಾಜ್ಯ ಹಾಗೂ ಸ್ವಂತ ರಾಜ್ಯಕ್ಕೆ ಸೇರಿದ ಜೀತವಿಮುಕ್ತರು ತುರ್ತು ಪರಿಹಾರವನ್ನು ಪಡೆಯಲು ಅರ್ಹರಿರುತ್ತಾರೆ.

4. ಬಿಡುಗಡಗೊಳಿಸಲಾದ ಜೀತವಿಮುಕ್ತರಿಗೆ ತುರ್ತು ಪರಿಹಾರವನ್ನು **A/c Payee cheque/RTGS/E-transfer** ಮೂಲಕ ಮಾತ್ರ ಅನುದಾನವನ್ನು ನೀಡಬೇಕು.

5. ವರ್ಷವಾರು ಜೀತವಿಮುಕ್ತರ ಪ್ರತ್ಯೇಕ ವಹಿಯನ್ನು ನಿರ್ವಹಿಸಬೇಕು. ಈ ವಹಿಯಲ್ಲಿ ಜೀತದಾಳುಗಳ ಹೆಸರು, ವಿಳಾಸ, ಗುರುತಿನ ಸಂಖ್ಯೆಗಳ ವಿವರ, ಸಂಪರ್ಕ ಸಂಖ್ಯೆ, ಅನುದಾನ ಸ್ವೀಕೃತಿಯಾದ ಬಗ್ಗೆ ಸಹಿಯನ್ನು ಪಡೆಯಬೇಕು.

6. ಪ್ರಕರಣ ಪತ್ತೆಯಾದಾಗ ಸರ್ಕಾರಕ್ಕೆ ಪ್ರಕರಣದ ಟಿಪ್ಪಣಿ, **FIR** ಪ್ರತಿ, ಬಿಡುಗಡೆ ಪ್ರಮಾಣ ಪತ್ರಗಳ ಪ್ರತಿ, ತುರ್ತು ಪರಿಹಾರವನ್ನು ನೀಡಿರುವ ಸ್ವೀಕೃತಿ ರಸೀದಿಗಳ

Scanned by CamScanner

ವಿವರವನ್ನು ಖಡ್ಡಾಯವಾಗಿ ಕಳುಹಿಸಬೇಕು.

7. ಕಾರ್ಪಸ್ ನಿಧಿ ನಿರ್ವಹಣೆಯನ್ನು ಆಡಿಟ್ ಮಾಡಿಸಿ , ಸರ್ಕಾರಕ್ಕೆ ಪ್ರತೀ ವರ್ಷ ವಿವರ ಸಲ್ಲಿಸಬೇಕು.

8. ಮಾರ್ಚ್ ಅಂತ್ಯಕ್ಕೆ ಅನುದಾನ ವ್ಯಪಗತವಾಗದಂತೆ ಅದನ್ನು ಸೆಳೆದು ಜಿಲ್ಲಾಧಿಕಾರಿಯವರ ಪಿ.ಡಿ. ಖಾತೆಯಲ್ಲಿ ನಿರ್ವಹಿಸಬೇಕು, ಇದರ ಕುರಿತು ಸರ್ಕಾರಕ್ಕೆ ವರದಿ ನೀಡಬೇಕು.

9. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/19/ಆರ್‌ಬಿಎಲ್/2019, ಬೆಂಗಳೂರು, ದಿನಾಂಕ- 02.01.2020ರಲ್ಲಿ ತಿಳಿಸಿರುವ ಉದ್ದೇಶಗಳಿಗೆ ಶೇ 10%ರಷ್ಟು ಮಿತಿಯೊಳಗೆ ಕಾರ್ಪಸ್ ನಿಧಿಯನ್ನು ಬಳಕೆ ಮಾಡಲು ಅವಕಾಶವಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸಹಮತಿ ಸಂಖ್ಯೆ: ಆ.ಇ.272/ವೆಚ್ಚ-6/2020(E), ದಿನಾಂಕ-14.8.2020ರನ್ವಯವೇ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

6/7/20

(ರೇವಣಪ್ಪ ಕೆ)
ನಿರ್ದೇಶಕರು ಗ್ರಾಮೂಸೌ-2,
ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬೆಂಗಳೂರು.

karsgsy@gmail.com, 080-22010418

ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ:

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ.
2. ರಾಜ್ಯದ ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳಿಗೆ
3. 52 ವಿಭಾಗಗಳ ಉಪ-ವಿಭಾಗಾಧಿಕಾರಿಗಳಿಗೆ

ಪ್ರತಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳಿಗೆ, ಕಂದಾಯ ಇಲಾಖೆ
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳಿಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ. ರಾಜ್) ಇವರ ಆಪ್ತ ಕಾರ್ಯದರ್ಶಿಗಳಿಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

Scanned by CamScanner

4. ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳಿಗೆ, ಕಾರ್ಮಿಕ ಇಲಾಖೆ.
5. ಎಲ್ಲಾ ಮುಖ್ಯಕಾರ್ಯನಿರ್ವಾಹಕಾಧಿಕಾರಿಗಳಿಗೆ, ಜಿಲ್ಲಾ ಪಂಚಾಯಿತಿ.
6. ಇಲಾಖಾ ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪಂ. ರಾಜ್ ಇಲಾಖೆರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
7. ನಿರ್ದೇಶಕರು, ಯೋಉಮಾ ಶಾಖೆ, ಗ್ರಾಅಪಂ. ರಾಜ್ ಇಲಾಖೆ
8. ವಿಶೇಷಾಧಿಕಾರಿಗಳು,ವೆಚ್ಚ-6, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
9. ಉಪ ನಿರ್ದೇಶಕರು, ಟಿ.ಎನ್.ಎಮ್.ಸಿ. ಖನಿಜ ಭವನ ಬೆಂಗಳೂರು ಇವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
10. ಸಂಪಾದಕರು, ಕರ್ನಾಟಕ ವಿಕಾಸ ಪ್ರಕಟನೆಗೆ
11. ನಿರ್ದೇಶಕರು, ಇ-ಆಡಳಿತ ಶಾಖೆ, ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು.
12. ಹೆಚ್ಚುವರಿ ಪ್ರತಿಗಳು

Scanned by CamScanner

# ಅನುಬಂಧ-1

**2020-21 ನೇ ಸಾಲಿಗೆ ಜೀತದಾಳುಗಳ ಪುನರ್ವಸತಿ ಯೋಜನೆಯಡಿ ಲೆಕ್ಕ ಶೀರ್ಷಿಕೆ- 2230-01-112-0-01(059)ರಡಿ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡುವ ಕಾರ್ಪಸ್ ಅನುದಾನ ತಖ್ತೆ:**

| Sl.No | District Name | DDO Code | Amount (Rs. In Lakhs) |
|---|---|---|---|
| 1 | Raichur | 12276 D | 2.00 |
| 2 | Bagalkote | 20051 O | 6.00 |
| 3 | Bangalore( R) | 20052 D | 7.00 |
| 4 | Bangalore(U) | 20053 D | 100.00 |
| 5 | Bellary | 20054 O | 5.00 |
| 6 | Bidar | 20055 O | 2.00 |
| 7 | Vijayapur | 20056 D | 6.00 |
| 8 | Chamarajanagara | 20057 D | 7.00 |
| 9 | Chikkaballapur | 20058 O | 45.00 |
| 10 | Davanagere | 20059 D | 2.00 |
| 11 | Dharwad | 20060 D | 2.00 |
| 12 | Kalaburagi | 20061 D | 2.00 |
| 13 | Gadag | 20062 D | 2.00 |
| 14 | Hassan | 20063 D | 10.00 |
| 15 | Haveri | 20064 O | 2.00 |
| 16 | Kodagu | 20065 O | 2.00 |
| 17 | Chikkamagalur | 20066 O | 3.00 |
| 18 | Chitradurga | 20067 O | 2.00 |
| 19 | Udupi | 20068 D | 2.00 |
| 20 | Yadagiri | 20069 D | 2.00 |
| 21 | Kolar | 20070 O | 4.00 |
| 22 | Koppal | 20071 O | 2.00 |
| 23 | Mandya | 20072 D | 8.00 |
| 24 | Mysore | 20073 O | 15.00 |
| 25 | Ramanagara | 20074 D | 10.00 |
| 26 | Shimoga | 20075 O | 4.00 |
| 27 | Tumkur | 20076 D | 8.00 |
| 28 | Dakshina Kannada | 20087 D | 2.00 |
| 29 | Belagaavi | 20088 O | 8.00 |
| 30 | UttaraKannada | 20089 D | 3.00 |
| | **Total** | | **275.00** |

6/11/20

ನಿರ್ದೇಶಕರು,
ಗ್ರಾಮೀಣ & ಪದನಿಮಿತ್ತ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಬಹುಮಹಡಿಗಳ ಕಟ್ಟಡ, ಬೆಂಗಳೂರು-560001.

Scanned by CamScanner